ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 60 ಬಿಸಿಎ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 28-03-2005.

ಸುತ್ತೋಲೆ

ವಿಷಯ: ಎಲ್ಲಾ ಉದ್ದೇಶಗಳಿಗಾಗಿ ಜಾತಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವ ಕುರಿತು ಭೌತಿಕ ಸತ್ಯಾಪನ ಕುರಿತು.

- - - -

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಮತ್ತು ಇತರೆ ಹಿಂದುಳಿದ ವರ್ಗಗಳ(ನೇಮಕಾತಿಗಳು ಮತ್ತು ಮುಂಕಾದವುಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು, 2000ರ ನಿಯಮ 3(ಎ)(2) ಪ್ರಕಾರ ತಹಶೀಲ್ದಾರರು ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ, ನಮೂನೆ D,E,F.ಗಳಲ್ಲಿ ವ್ಯಾಸಂಗ, ಉದ್ಯೋಗ ಮತ್ತಿತರ ಎಲ್ಲಾ ಉದ್ದೇಶಗಳಿಗಾಗಿ ಜಾತಿ ಅಥವಾ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡತಕ್ಕದ್ದೆಂದು ಶ್ರುತಪಡಿಸಲಾಗಿದೆ.

ಕೆಲವು ತಹಶೀಲ್ದಾರರು ನಿಯಮಗಳನ್ನು ಅನುಸರಿಸದೇ ಅನೇಕ ನಮೂನೆಗಳಲ್ಲಿ ಇಂತಹ ಪ್ರಮಾಣ ಪತ್ರಗಳನ್ನು ನೀಡುತ್ತಿರುವುದಷ್ಟೇ ಅಲ್ಲದೆ ಪೂರ್ವಭಾವಿ ಪರಿಶೀಲನೆ ನಡೆಯಿಸದೇ ಅರ್ಜಿ ಸಲ್ಲಿಸಿದ ದಿನವೇ ಪ್ರಮಾಣ ಪತ್ರಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ತಾಲ್ಲೂಕು ಕಛೇರಿಗಳಲ್ಲಿ ಸಾಮಾನ್ಯವಾಗಿ ಭೌತಿಕ ಪರಿಶೀಲನೆ ನಡೆಯಿಸಿ ಇಂತಹ ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ಈ ಕೆಳಕಂಡ ತಪಶೀಲಿನಲ್ಲಿ, ಕಾಣಿಸಿರುವಂತೆ ಕನಿಷ್ಠ ಹತ್ತು ದಿನಗಳ ಕಾಲಾವಧಿಯು ಅವಶ್ಯವೆಂದು ಸ್ಪಷ್ಟಪಡುತ್ತದೆ.

1.	ಅರ್ಜಿದಾರರು ತಾಲ್ಲೂಕು ಕಛೇರಿಯಲ್ಲಿ ಅರ್ಜಿಸಲ್ಲಿಸುವುದು	1(ಒಂದು) ದಿನ
2.	ಅರ್ಜಿಯನ್ನು ವರದಿಗಾಗಿ ಗ್ರಾಮಲೆಕ್ಕಿಗರಿಗೆ ಕಳಿಸಿರುವುದಕ್ಕೆ ಅಗತ್ಯ ಕಾಲಾವಧಿ	3ನೇ(ಮೂರು) ದಿನ
3.	ಸ್ಥಳೀಯ ವಿಚಾರಣೆಯನ್ನು ಪೂರ್ಣಗೊಳಿಸಿ, ಗ್ರಾಮ ಲೆಕ್ಕಿಗರು ಕಡತವನ್ನು ರಾಜಸ್ವ ನಿರೀಕ್ಷಕರಿಗೆ ಕಳಿಸಲು ಬೇಕಾದ ಕಾಲಾವಧಿ	5ನೇ(ಐದು) ದಿನ
4.	ರಾಜಸ್ವ ನಿರೀಕ್ಷಕರು ಸ್ಥಳೀಯ ವಿಚಾರಣೆ ನಡೆಸಿ, ಕಡತವನ್ನು ತಹಶೀಲ್ದಾರರಿಗೆ ವರದಿಯೊಂದಿಗೆ ಸಲ್ಲಿಸಲು ಬೇಕಾಗುವ ಕಾಲಾವಧಿ	7ನೇ(ಏಳು) ದಿನ
5.	ತಹಶೀಲ್ದಾರರ ಕಛೇರಿಯಲ್ಲಿ ಪ್ರಮಾಣ ಪತ್ರ ಅಥವಾ ಸೂಕ್ತ ಹಿಂಬರಹ ನೀಡಲು ಬೇಕಾಗುವ ಕಾಲಾವಧಿ.	10ನೇ(ಹತ್ತು) ದಿನ